# ಚಿಕ್ಕಣ್ಣನ ಪ್ಯಾಥೊ ಸಾಂಗ್

‘ಎಲ್ಲಾ ಹಳ್ಳಿ ಲವ್ ಸ್ಟೋರೀಲೂ ಹಿಂಗೆ ಕಣಮ್ಮ’ ಎನ್ನುವ ಹಾಡು ಪ್ರಸ್ತುತ ಗಾಂಧಿನಗರದಲ್ಲಿ ಹೆಚ್ಚು ಚಲಾವಣೆಯಲ್ಲಿರುವ ಹಾಡುಗಳಲ್ಲೊಂದು. ‘ಕನ್ನಡಕ್ಕಾಗಿ ಒಂದನ್ನು ಒತ್ತಿ’ ಸಿನಿಮಾದ ಈ ಗೀತೆಯ ಸಾಹಿತ್ಯ ನಾಗೇಂದ್ರಪ್ರಸಾದ್ ಅವರದು. ಅರ್ಜುನ್ ಜನ್ಯ ಸಂಗೀತ ಸಂಯೋಜಿಸಿರುವ ಹಾಡನ್ನು ವಿಜಯ್‌ಪ್ರಕಾಶ್ ಹಾಡಿದ್ದಾರೆ. ನಟ ಚಿಕ್ಕಣ್ಣನವರ ಮೇಲೆ ಚಿತ್ರೀಕರಿಸಿರುವುದು ಈ ಪ್ಯಾಥೊ ಸಾಂಗ್‌ನ ವಿಶೇಷ.

ಕುಶಾಲ್ ನಿರ್ದೇಶನದ ತೆರೆಗೆ ಸಿದ್ಧವಾಗಿರುವ ಈ ಸಿನಿಮಾದ ಕಥೆ, ಚಿತ್ರಕಥೆ ಹಾಗೂ ಸಂಭಾಷಣೆ ಕೂಡ ನಿರ್ದೇಶಕರದ್ದೇ. ನಾಯಕ–ನಾಯಕಿ ಎನ್ನುವ ಸಿದ್ಧಸೂತ್ರವನ್ನು ಬಿಟ್ಟಿರುವ ಕುಶಾಲ್, ಚಿತ್ರದಲ್ಲಿನ ಎಲ್ಲ ಪಾತ್ರಗಳ ಮೇಲೆಯೂ ಗಮನಹರಿಸಿದ್ದಾರೆ. ಆ ಕಾರಣಕ್ಕಾಗಿಯೇ ಚಿಕ್ಕಣ್ಣನವರಿಗೆ ಹಾಡಿನಭಾಗ್ಯ ದೊರೆತಿರುವುದು. ಚಿತ್ರದಲ್ಲಿ ಅವರದು ಕನ್ನಡ ಹೋರಾಟಗಾರನ ಪಾತ್ರ.

‘ಕನ್ನಡಕ್ಕಾಗಿ ಒಂದನ್ನು ಒತ್ತಿ’ ಸ್ವಾರಸ್ಯಕರ ಪಯಣವೊಂದರ ಕಥೆಯನ್ನು ಒಳಗೊಂಡಿದೆ. ಅನಿರೀಕ್ಷಿತ ಘಟನೆಗಳು ಸಂಭವಿಸುವ, ವಿಚಿತ್ರ ಪಾತ್ರಗಳು ಸಂಧಿಸುವ ಬೆಂಗಳೂರಿನಿಂದ ಚಿಕ್ಕಮಗಳೂರುವರೆಗಿನ ಈ ಪಯಣದ ಕಥೆ ಸಹೃದಯರಿಗೆ ಹಿತಾನುಭವ ನೀಡಲಿದೆಯಂತೆ. ಕೃಷಿ ತಾಪಂಡ, ಚಿಕ್ಕಣ್ಣ, ಎಚ್.ಜಿ. ದತ್ತಾತ್ರೇಯ, ಸುಚೇಂದ್ರಪ್ರಸಾದ್, ರಂಗಾಯಣ ರಘು, ಉಮೇಶ್ ಸೇರಿದಂತೆ ಹಲವು ಪ್ರತಿಭಾನ್ವಿತ ಕಲಾವಿದರು ತಾರಾಗಣದಲ್ಲಿದ್ದಾರೆ. ಶಟಮರ್ಶನ್ ಅವಿನಾಶ್ ಎನ್ನುವ ರಂಗಭೂಮಿ ನಟ ಪ್ರಮುಖ ಪಾತ್ರದಲ್ಲಿ ನಟಿಸಿದ್ದಾರೆ.





# ವಜ್ರ ಹುಡುಕುತ್ತಾ ರೂಪಿಕಾ...

ಕಳೆದ ಎರಡು ಮೂರು ವರ್ಷಗಳಲ್ಲಿ ಹೆಚ್ಚಾಗಿ ತೆರೆಮರೆಯಲ್ಲಿಯೇ ಉಳಿದಿರುವ ಕನ್ನಡ ನಟಿ ರೂಪಿಕಾ ‘ರುದ್ರಾಕ್ಷಿಪುರ’ ಚಿತ್ರದ ವಿಶಿಷ್ಟ ಪಾತ್ರವೊಂದರ ಮೂಲಕ ಗಾಂಧಿನಗರದಲ್ಲಿ ಮತ್ತೆ ಸುದ್ದಿಯಲ್ಲಿದ್ದಾರೆ.

‘ಇಂಗಳೆಮಾರ್ಗ’, ‘ರಾಗ’ದಂತಹ ವಿಭಿನ್ನ ಚಿತ್ರಗಳಲ್ಲಿ ನಟಿಸಿದ ನಂತರ ಇತ್ತೀಚೆಗೆ ‘ಮಂಜರಿ’ ಎನ್ನುವ ಚಿತ್ರವೊಂದರಲ್ಲಿ ನಟಿಸಿದ್ದಾರೆ. ಈ ಹಾರರ್ ಚಿತ್ರದಲ್ಲಿ ಪ್ರೇಮ ಹಾಗೂ ಹಾಸ್ಯಕ್ಕೂ ಸಾಕಷ್ಟು ಅವಕಾಶವಿದೆಯಂತೆ.

‘ರುದ್ರಾಕ್ಷಿಪುರ’ದ ಕಥೆ ವಿಶಿಷ್ಟವಾಗಿದೆ. ವಜ್ರವೊಂದರ ಬೆನ್ನಿಗೆ ಬಿದ್ದ ಕಳ್ಳರ ಗ್ಯಾಂಗ್‌ನ ಕಥೆ ಈ ಚಿತ್ರದಲ್ಲಿದೆ. ಈಶ್ವರ್ ಪೋಲಂಕಿ ನಿರ್ದೇಶನದ ಈ ಚಿತ್ರದಲ್ಲಿ ರೂಪಿಕಾ, ವಜ್ರದ ಸಂಶೋಧಕಿಯ ಪಾತ್ರದಲ್ಲಿ ನಟಿಸಿದ್ದಾರೆ. ಪಾತ್ರಕ್ಕಾಗಿ ಸಾಕಷ್ಟು ತೂಕವನ್ನೂ ಇಳಿಸಿಕೊಂಡಿದ್ದಾರೆ.

‘ಹಳ್ಳಿಯೊಂದರಲ್ಲಿ ನಡೆಯುವ ಈ ಕಥೆಯಲ್ಲಿ ದೈವಶಕ್ತಿಯ ಚಹರೆಯೂ ಇದೆ’ ಎನ್ನುವುದು ಚಿತ್ರಕಥೆಯ ಬಗ್ಗೆ ನಿರ್ದೇಶಕರ ಬಣ್ಣನೆ. ಗ್ರಾಮ್ಯ ಪರಿಸರದಲ್ಲಿ ನಡೆಯುವ ಈ ಕಥೆ ಪ್ರೇಕ್ಷಕರಿಗೆ ರೋಚಕ ಅನುಭವ ನೀಡಲಿದೆಯಂತೆ. ಕಿರುತೆರೆ ಕಲಾವಿದ ಅರ್ಜುನ್ ಚೌಹಾಣ್ ‘ರುದ್ರಾಕ್ಷಿಪುರ’ದಲ್ಲಿ ರೂಪಿಕಾಗೆ ಜೋಡಿಯಾಗಿ ನಟಿಸಿದ್ದಾರೆ. ರೂಪಿಕಾ ಮೂಲತಃ ಶಾಸ್ತ್ರೀಯ ನೃತ್ಯಗಾರ್ತಿ. ಅವರ ನೃತ್ಯಪ್ರತಿಭೆ ಕೂಡ ಚಿತ್ರದಲ್ಲಿ ಅನಾವರಣಗೊಂಡಿದೆಯಂತೆ. ರವಿಚೇತನ್ ಖಳನಾಯಕನ ಪಾತ್ರದಲ್ಲಿ ನಟಿಸಿದ್ದಾರೆ. ಪವನ್ ಪಾರ್ಥ ಸಂಗೀತ, ಸುದೀಪ್ ಪೆಡ್ರಿಕ್ ಛಾಯಾಗ್ರಹಣ ಚಿತ್ರಕ್ಕಿದೆ. ಜುಲೈನಲ್ಲಿ ‘ರುದ್ರಾಕ್ಷಿಪುರ’ವನ್ನು ತೆರೆ ಕಾಣಿಸಲು ಚಿತ್ರತಂಡ ಪ್ರಯತ್ನಿಸುತ್ತಿದೆ.

■ ರಘು